# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 311
2. ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ
3. ಉತ್ತರಿಸಬೇಕಾದ ದಿನಾಂಕ : 17.02.2022

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಜಿಲ್ಲೆ, ಹಾಸನ ನಗರದಲ್ಲಿ, Integrated Master Plan ಪ್ರಕಾರ ಹಾಸನ ನಗರದ ಚನ್ನಪಟ್ಟಣ ಕೆರೆಯ ಅಂಗಳದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುವ ವಿಹಾರಧಾಮದ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಮುಂತಾದ ಕಾಮಗಾರಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ; | ಹಾಸನ ನಗರದ ಚನ್ನಪಟ್ಟಣ ಕೆರೆಯ ಅಂಗಳದಲ್ಲಿ ವಿಹಾರಧಾಮದ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಕಾಮಗಾರಿಯ ರೂ.144.00 ಕೋಟಿ ಮೊತ್ತದ ಡಿ.ಪಿ.ಆರ್ ಪ್ರಸ್ತಾವನೆಗೆ ಸರ್ಕಾರದ ದಿನಾಂಕ:28.02.2019 ರ ಆದೇಶದಲ್ಲಿ ರೂ.36.00 ಕೋಟಿಗಳ ಅಂದಾಜು ಮೊತ್ತಕ್ಕೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳುವ ಷರತ್ತಿಗೊಳಪಟ್ಟು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ.<br><br>ಮುಂದುವರೆದು, ಸರ್ಕಾರದ ದಿನಾಂಕ:24.07.2019ರ ತಿದ್ದುಪಡಿ ಆದೇಶದಲ್ಲಿ, ರೂ.144.00 ಕೋಟಿ ಮೊತ್ತದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ 2019-20 ನೇ ಸಾಲಿನಲ್ಲಿ ಕಾಮಗಾರಿಯ ವೆಚ್ಚವನ್ನು ರೂ.36.00 ಕೋಟಿಗಳಿಗೆ ಸೀಮಿತಗೊಳಿಸಿ ಹಾಗೂ ಉಳಿಕೆ ಮೊತ್ತವಾದ ರೂ.108.00 ಕೋಟಿಗಳ ಕಾಮಗಾರಿಯನ್ನು 2020-21ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಹಂಚಿಕೆಯಾಗುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾರುತ್ತದೆ. |
| ಆ) | ಈ ಕಾಮಗಾರಿಗಳನ್ನು ಒಳಗೊಂಡ ಹಾಗೂ ಮಳೆಗಾಲದಲ್ಲಿ ಮಳೆ ನೀರು ಮತ್ತು ಕೊಳಚೆ ನೀರು ಹೊರಹಾಕುವ ಯೋಜನೆಯನ್ನು ರೂ.144.00 ಕೋಟಿಗಳಲ್ಲಿ ಕೈಗೆತ್ತಿಕೊಳ್ಳುವಂತೆ ಸರ್ಕಾರವು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲಾಗಿರುವುದು ನಿಜವೇ; | ತದನಂತರ, ಹಾಸನ ವಿಧಾನಸಭಾ ಕ್ಷೇತ್ರದ ಶಾಸಕರು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ದಿನಾಂಕ:12.09.2019 ರ ಪತ್ರದಲ್ಲಿ, ಚನ್ನಪಟ್ಟಣ ಕೆರೆ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ರೂ.144.00 ಕೋಟಿ ಮೊತ್ತದಲ್ಲಿ ಹಾಸನ ನಗರಕ್ಕೆ ಸರಿಹೊಂದುವಂತೆ ಚನ್ನಪಟ್ಟಣ ಕೆರೆ ಮತ್ತು ವಿಹಾರಧಾಮದ ಅಭಿವೃದ್ಧಿಯನ್ನು ಕೈಗೊಂಡು ಉಳಿಕೆ ಮೊತ್ತದಲ್ಲಿ ಹಾಸನ ನಗರದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಇತರೆ ಉದ್ಯಾನವನಗಳು ಮತ್ತು ಸುತ್ತಮುತ್ತಲ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಅವಶ್ಯಕವಾಗಿದ್ದು, ಮಾರ್ಪಡಿಸಿದ ಪ್ರಸ್ತಾವನೆಯನ್ನು ರೂ.144.00 ಕೋಟಿ ಮೊತ್ತದ ಮಿತಿಯಲ್ಲಿ ತಯಾರಿಸಲಾಗಿದ್ದು, ಚನ್ನಪಟ್ಟಣ ಕೆರೆ ಸೇರಿದಂತೆ ಹಾಸನ ನಗರದ 6 ಪ್ರಮುಖ ಕೆರೆಗಳನ್ನು ಹಾಗೂ 9 ಉದ್ಯಾನವನಗಳನ್ನು ಹಾಗೂ ಮೂಲಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ರೂ.144.00 ಕೋಟಿ ಮೊತ್ತದ ಮಿತಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. |

| | | |
|---|---|---|
| | | ಹಾಸನ ನಗರದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಇತರೆ ಉದ್ಯಾನವನಗಳು ಮತ್ತು ಸುತ್ತಮುತ್ತಲ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ರೂ.144.00 ಕೋಟಿಗಳ ಮೊತ್ತದ ಮಾರ್ಪಡಿಸಿದ ಯೋಜನಾ ವರದಿಗೆ ದಿನಾಂಕ:05.10.2020 ರಂದು ನಡೆದ ನಿಗಮ ಮಂಡಳಿಯ 72ನೇ ಸಭೆಯ ಅನುಮೋದನೆ ನಂತರ, ಸರ್ಕಾರದ ಆದೇಶ ದಿನಾಂಕ:02.06.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. |
| ಇ) | ಪ್ರಸ್ತುತ ಕಡತವು ಯಾವ ಹಂತದಲ್ಲಿರುತ್ತದೆ; ಈ ಯೋಜನೆಯನ್ನು ಮೂಲ ಯೋಜನೆಯಂತೆ ಯಥಾವತ್ತಾಗಿ ಕೈಗೊಳ್ಳಲು ಸರ್ಕಾರಕ್ಕಿರುವ ಅಡೆತಡೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಸದರಿ ಕಾಮಗಾರಿಯ ಟೆಂಡರ್‌ಗೆ ದಿನಾಂಕ:22.07.2021 ರಂದು ನಡೆದ ನಿಗಮ ಮಂಡಳಿಯ 73ನೇ ಸಭೆಯ ಅನುಮೋದನೆಯ ಮೇರೆಗೆ ರೂ.138,54,60,104/- ಟೆಂಡರ್ ಮೊತ್ತಕ್ಕೆ ದಿನಾಂಕ:30.07.2021 ರಂದು ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಈ | ಹಾಸನ ನಗರ ಚನ್ನಪಟ್ಟಣಕೆರೆ ಸೇರಿದಂತೆ ಹಾಸನ ನಗರದ ಇತರೆ 05 ಕೆರೆಗಳು ಮತ್ತು 09 ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ರೂ.144.00 ಕೋಟಿಗಳು ಮೊತ್ತದ ಯೋಜನೆ ಅಂದಾಜು ವಿವರಗಳು, ಟೆಂಡರ್ ಕರಾರಿನ ವಿವರಗಳು ಮತ್ತು ನಿಗದಿಯಾಗಿರುವ ಟೆಂಡರ್‌ದಾರರ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು; | ಹಾಸನ ನಗರದ ಚನ್ನಪಟ್ಟಣ ಕೆರೆಯ ಸೌಂದರೀಕರಣ ಸೇರಿದಂತೆ ಹಾಸನ ನಗರಕ್ಕೆ ಹೊಂದಿಕೊಂಡಿರುವ 06 ಕೆರೆಗಳ ಅಭಿವೃದ್ಧಿ ಮತ್ತು ಹಾಸನ ನಗರ ವ್ಯಾಪ್ತಿಯಲ್ಲಿ ಬರುವ 09 ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯ ಘೋಷ್ವಾರೆ ಕೆಳಕಂಡಂತಿದೆ: |

| ಕ್ರ. ಸಂ | ಕೆರೆ ಮತ್ತು ಉದ್ಯಾನವನಗಳ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಅ) ಕೆರೆಗಳು: | | |
| 1 | ಚನ್ನಪಟ್ಟಣ ಕೆರೆ | 3915.33 |
| 2 | ಗವೇನಹಳ್ಳಿ ಕೆರೆ | 655.55 |
| 3 | ಬೂವನಹಳ್ಳಿ ಕೆರೆ | 554.12 |
| 4 | ಸತ್ಯಮಂಗಲ ಕೆರೆ | 1142.10 |
| 5 | ಹುಣಸಿನಕೆರೆ | 1123.37 |
| 6 | ಗುಡ್ಡೇನಹಳ್ಳಿ ಕೆರೆ | 336.70 |
| | ಉಪ ಮೊತ್ತ (ಅ) : | 7727.17 |
| ಆ) ಉದ್ಯಾನವನಗಳು: | | |
| 7 | ಮಹಾರಾಜ ಪಾರ್ಕ್ | 1436.22 |
| 8 | ವಿಜಯನಗರ ಪಾರ್ಕ್ | 461.95 |
| 9 | ಹೌಸಿಂಗ್ ಬೋರ್ಡ್ ಪಾರ್ಕ್ | 178.08 |
| 10 | ಗಂಧದ ಕೋಠಿ ಪಾರ್ಕ್ | 426.96 |
| 11 | ಹೊಯ್ಸಳ ನಗರ ಪಾರ್ಕ್ | 372.01 |
| 12 | ಫ್ರೀಡಂ ಪಾರ್ಕ್ | 783.21 |

| | | | |
|---|---|---|---|
| | 13 | ಗಣೇಶ ಟೆಂಪಲ್ ಪಾರ್ಕ್ | 206.12 |
| | 14 | ಹಿಂದೂ ರುದ್ರಭೂಮಿ | 163.09 |
| | 15 | ಸಿಲ್ವರ್ ಜ್ಯೂಬಿಲಿ ಪಾರ್ಕ್ | 440.66 |
| | | **ಉಪ ಮೊತ್ತ (ಆ):** | **4468.30** |
| | | **ಒಟ್ಟು ಸಿವಿಲ್ ಕೆಲಸ (ಅ + ಆ) :** | **12195.47** |
| | | ನಿರ್ವಹಣಾ ವೆಚ್ಚ (3 ವರ್ಷ) | 496.00 |
| | | **ಒಟ್ಟು (ಇ)** | **12691.47** |
| | | ಜಿ.ಎಸ್.ಟಿ 12% | 1522.98 |
| | | ಪಿ.ಎಂ.ಸಿ 1% | 126.91 |
| | | Consultancy service for preparation of DPR and Miscellaneous | 58.64 |
| | | **ಒಟ್ಟು (ಅ+ಆ+ಇ)** | **14400.00** |

ಮೇಲಿನ ಕಾಮಗಾರಿಯನ್ನು ಕರಾರು ಸಂಖ್ಯೆ:33/2021-22 ದಿನಾಂಕ:30.07.2021 ರಲ್ಲಿ L1 ಬಿಡ್ಡುದಾರರಾದ Sri Srinivasa Rao Balusu (M/s.BSR Infratech India Limited), No.851, D-Block, 15th Cross, Sahakaranagara, Bengalore-560092 ಇವರಿಗೆ ರೂ.138,54,60,104/- (ಅಪ್‌ಡೇಟೆಡ್ ಮೊತ್ತಕ್ಕೆ ಶೇ.9 ಹೆಚ್ಚುವರಿ) ಮೊತ್ತಕ್ಕೆ 24 ತಿಂಗಳುಗಳ ಕಾಲಾವಧಿಯೊಂದಿಗೆ ಕಾಮಗಾರಿಯನ್ನು ವಹಿಸಲಾಗಿರುತ್ತದೆ.

| | | |
|---|---|---|
| ಉ) | ಕಾವೇರಿ ನೀರಾವರಿ ನಿಗಮದ ಅನುದಾನದಲ್ಲಿ ನಗರದ ಪ್ರದೇಶಗಳಲ್ಲಿರುವ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯ ಕೆರೆಗಳನ್ನು ಮತ್ತು ನಗರ ಸಭೆ ವ್ಯಾಪ್ತಿಯ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅವಕಾಶವಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ನಿಗಮದ ಅಡಿಯಲ್ಲಿ ಬರುವ ಯೋಜನೆಗಳ ಅಚ್ಚುಕಟ್ಟು ವ್ಯಾಪ್ತಿಯನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿರುವ ಕೆರೆಗಳನ್ನು ಮತ್ತು ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು ನಿಗಮದ ಧ್ಯೇಯೋದ್ದೇಶಗಳಡಿಯಲ್ಲಿ ಬರುವುದಿಲ್ಲ.<br><br>ಆದರೆ, ಕೆಲವು ವಿಶೇಷ ಪ್ರಕರಣಗಳಲ್ಲಿ ನಿಗಮ ಮಂಡಳಿ ಸಭೆಯ ತೀರುವಳಿ ಪಡೆದು ತದನಂತರ ಪ್ರಸ್ತಾವನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. |

***ಸಂಖ್ಯೆ:ಜಸಂಇ 20 ಎಸ್‌ಎಲ್‌ಎ 2022***

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು